ಸಮಿತಿಯವರು ಶಿಫಾರಸ್ಸು ಮಾಡಿ ಮೂರು ತಿಂಗಳೊಳಗಾಗಿ ಕೆಲಸ ಪ್ರಾರಂಭಿಸಬೇಕೆಂದು ಹೇಳಿದ್ದರು, ನೀವು ಎಷ್ಟು ತಿಂಗಳೊಳಗಾಗಿ ಈ ಕೆಲಸ ಪ್ರಾರಂಭಿಸುತ್ತೀರಿ ಎಂಬುದನ್ನು ಹೇಳಿರಿ.

ಡಾ. ಆರ್.ಬಿ. ಚೌಧುರಿ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೌಜಲಗಿಯವರು ಏನು ಏತ ನೀರಾವರಿಯ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಹೇಳುವುದಾದರೆ ಈ ಏತ ನೀರಾವರಿಯನ್ನು ಪ್ರಾರಂಭ ಮಾಡುವುದಕ್ಕೆ ಬಹಳಷ್ಟು ಆಡಚಣೆಗಳು ಇದೆ, ಅದು ಮಾನ್ಯ ಸದಸ್ಯರಿಗೂ ಗೊತ್ತು. ಆದರಿಂದಾಗಿ ಈ ಕೆಲಸ ತಡವಾಗಿದೆ. ಇದಲ್ಲದೆ ಇದರಬಗ್ಗೆ ಚರ್ಚೆ ಮಾಡುವುದಕ್ಕೆ ಬೆಳಗಾಂಗೆ ಬಂದು ಈಗಾಗಲೇ ತಮ್ಮೆಲ್ಲರ ಜೊತೆ ಚರ್ಚೆ ಮಾಡಿ ಇದರಲ್ಲಿ ಏನೇನು ಅಡಚಣೆ ಇದೆ ಅದನ್ನು ನಿವಾರಣೆ ಮಾಡುತ್ತೇವೆಂದು ಹೇಳಿದ್ದೇನೆ. ಮತ್ತು ಇದರ ಬಗ್ಗೆ ಅಂದಾಜು ಸಮಿತಿಯವರು ಮೂರು ತಿಂಗಳಿನಲ್ಲಿ ಮಾಡಬೇಕೆಂದು ಶಿಫಾರಸ್ಸು ಮಾಡಿದೆ. ಆ ಸಮಿತಿಯಲ್ಲಿ ನಾನೂ ಕೂಡ ಇದ್ದೆ, ಅದು ನನಗೆ ಚೆನ್ನಾಗಿ ಗೊತ್ತು. ಈಗ ಇದಕ್ಕೆ ಸಾಕಷ್ಟು ಸಮಯ ಹಾಳಾಗಿ ಹೋಗಿರುವುದರಿಂದ ಇನ್ನು ಏನು ಸಮಯ ಇದೆ ಅದನ್ನು ಹಾಳು ಮಾಡದೆ ಶೀಘ್ರವಾಗಿ ಇದರ ಕೆಲಸವನ್ನು ಕೈಗೊಳ್ಳುತ್ತೇವೆ ಎಂದು ಹೇಳುತ್ತೇನೆ. ಮತ್ತು ಅಥಣಿಯ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ, ಅದನ್ನೂ ಕೂಡ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ :- ಎಷ್ಟು ದಿನದಲ್ಲಿ ತೆಗದುಕೊಳ್ಳುತ್ತೀರಿ? ತಾವು ಇಷ್ಟು ದಿನದಲ್ಲಿ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟುಬಿಡಿ. Say within three months. Plan, estimate ಆಗಿದೆ. Administrative approval ಆಗಿದೆ. ಹಣಕಾಸಿನ ತೊಂದರೆ ಇಲ್ಲ, ಮಾನ್ಯ ಮುಖಿಮಂತ್ರಿಗಳು ನಿಮಗೆ ನೀರಾವರಿಯ ಕೆಲಸಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಇಷ್ಟು ದಿನದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿಬಿಡಿ, ಆಕಸ್ಮಾತ್ ಅದು ಸಾಧ್ಯವಾಗಿದ್ದರೆ ನಾವೇನೂ ಮಾಡುವುದಿಲ್ಲ. 3-4 ತಿಂಗಳು ತಡವಾಗಬಹುದು.

ಡಾ. ಬಿ.ಆರ್. ಚೌಧುರಿ :- ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ, ನಾನೂ ಸಹ ಆದಷ್ಟು ಶೀಘ್ರವಾಗಿ ತೆಗದುಕೊಳ್ಳುತ್ತೇವೆಂದು ಹೇಳುತ್ತೇನೆ. ಹಿಂದೆ ಮೂರು ತಿಂಗಳಿನಲ್ಲಿ ತೆಗದುಕೊಳ್ಳುತ್ತೇವೆಂದು ಒಂದು ವರ್ಷಕ್ಕೆ ಹೋಯಿತು, ನಾವು ಇಷ್ಟು ಅವಧಿ ಎಂದು ಹೇಳಿದ ಮೇಲೆ ಸ್ವಲ್ಪ ಹೆಚ್ಚು ಕಮ್ಮಿಯಾಗುವ ಸಂಭವವಿರುತ್ತದೆ. ಅದರ ಸಲುವಾಗಿ ಇದನ್ನು ಶೀಘ್ರವಾಗಿ ತೆಗದುಕೊಳ್ಳುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು :- ಮಾನ್ಯ ಕೆ. ಲಕ್ಕಣ್ಣ ಮತ್ತು ಆರ್. ದಯಾನಂದರಾವ್ ರವರ ಗಮನ ಸೆಳೆಯುವ ಸೂಚನೆಯನ್ನು ತಡೆಹಿಡಿದಿದ್ದೇನೆ. ಈಗ ಕಂದಾಯ ಮಂತ್ರಿಗಳು ಆ ಮನೆಯಲ್ಲಿ ಇದ್ದಾರೆ, ಅವರು ಮುಂದೆ ತೆಗೆದುಕೊಳ್ಳೋಣವೆಂದು ತಿಳಿಸಿದ್ದಾರೆ. ಇದನ್ನು ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಆರ್. ದಯಾನಂದರಾವ್ :- ಬೇರೆ ಮಂತ್ರಿಗಳು ಇದ್ದಾರೆ, ನಾವು ಹೇಳುವುದನ್ನು ಅವರು ಬರೆದುಕೊಳ್ಳುತ್ತಾರೆ ಕಂದಾಯ ಮಂತ್ರಿಗಳು ಬಂದ ನಂತರದ ಉತ್ತರಕೊಡಬಹುದಲ್ಲ!

ಅಧ್ಯಕ್ಷರು :- ಅವರು ಉತ್ತರ ಹೇಳಬೇಕಲ್ಲ!

ಶ್ರೀ ಬ್ಲೇಸಿಯನ್ ಎಂ. ಡಿಸೋಜ :- ಕಂದಾಯ ಮಂತ್ರಿಗಳು ಇನ್ನೇನು ಬರುತ್ತಾರೆ.

ಅಧ್ಯಕ್ಷರು :- ಮಾನ್ಯ ವೈ.ಕೆ. ರಾಮಯ್ಯನವರು, ಏಕಾಂತಯ್ಯನವರು ಮತ್ತು ನಂಜುಂಡಸ್ವಾಮಿಯವರು ಕಳುಹಿಸಿರತಕ್ಕ ಗಮನ ಸೆಳೆಯುವ ಸೂಚನೆಯ ಬಗ್ಗೆ ಉತ್ತರಕೊಡಲು ಮಂತ್ರಿಗಳು ಇಲ್ಲ.

2. ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇ. 15 ಕೃಪಾಂಕವನ್ನು 15ಕ್ಕೆ ಇಳಿಸಿರುವುದು.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಸನ್ಮಾನ್ಯ ಅಧ್ಯಕ್ಷರೇ, ನಾನು ಮತ್ತೆ ನನ್ನ ಸ್ನೇಹಿತರುಗಳು

ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ ಶೇಕಡಾ 15 ಅಂಕಗಳನ್ನು ಕೊಡಬೇಕೆಂದು ಹೇಳಿ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆವು. I refuse to call the attention of the Government, because the concerned Minister is not available. ಕಾರಣವೇನೆಂದರೆ ನಾನು ಬಹಳ ದಿನಗಳ ಹಿಂದೆಯೇ ಇದನ್ನು ಕಳಿಸಿಕೊಟ್ಟಿದ್ದೇನೆ, ಇದು ಅತ್ಯಂತ ಗಂಭೀರವಾದುದು, ಗ್ರಾಮಾಂತರ ಪ್ರದೇಶದ ಜನರ ಸಮಸ್ಯೆಯ ಬಗ್ಗೆ, ಅವರ ನೋವು ನಲಿವಿನ ಬಗ್ಗೆ ಸರ್ಕಾರಕ್ಕೆ ಎಷ್ಟು ಗಂಭೀರವಾದಂಥ ಮನಸ್ಸು ಇದೆ ಎನ್ನುವ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೆ. ಆದರೂ I refuse to call the attention of this government as a protest against the attitude of the government. ಸಂಬಂಧಪಟ್ಟ ಮಂತ್ರಿಗಳಿಗೆ ನಿನ್ನೆ ಮೊನ್ನೆ ಇದನ್ನು ಕಳುಹಿಸಿರಲಿಲ್ಲ; ಎರಡು ವಾರಗಳ ಹಿಂದೆಯೇ ಕಳುಹಿಸಿಕೊಟ್ಟಿದ್ದೇನೆ.

ಡಾ. ಹೆಚ್.ಡಿ. ಲಮಾಣಿ :- ನನಗೆ ಉನ್ನತ ಶಿಕ್ಷಣ ಸಚಿವರು ಇದನ್ನು ವರ್ಗಾವಣೆ ಮಾಡಿದ್ದಾರೆ. ತಾವು ಸ್ವಲ್ಪ ಸಮಯ ಕೊಡುವುದಾದರೆ ಉತ್ತರವನ್ನು ಹೇಳುತ್ತೇನೆ.

Sri Y.K. Ramaiah :- Please, I am on my legs. ಈ ವಿಷಯವನ್ನು ನಿನ್ನೆ ಮೊನ್ನೆ ಕಳಿಸಿರಲಿಲ್ಲ,15 ದಿನಗಳ ಹಿಂದೆಯೇ ಕಳಿಸಿಕೊಟ್ಟಿದ್ದೇನೆ, ಅದು ಮಂತ್ರಿಗಳ ಗಮನಕ್ಕೆ ಬಂದಿದೆ, ಈ ಸದನವನ್ನು, ತಮ್ಮನ್ನು ಮತ್ತೆ ನಮ್ಮನ್ನು ಸರ್ಕಾರ ಇಷ್ಟೊಂದು ತುಚ್ಛವಾಗಿ ಕಾಣುವುದಾದರೆ, I refuse to call the attention of this government on this matter.

ಪ್ರೋ ಎಂ.ಡಿ. ನಂಜುಂಡಸ್ವಾಮಿ :- ಮಂತ್ರಿಗಳು ಇಲ್ಲದಿದ್ದರೆ ಹಾಳಾಗಿ ಹೋಗಲಿ; ಇದಕ್ಕೆ ಉತ್ತರವನ್ನಾದರೂ ಕಳಿಸಿಲ್ಲವಲ್ಲಾ? ಇದೇನು ಸಣ್ಣ ವಿಚಾರವೇ?

ಶ್ರೀ ವಾಟಾಳ್ ನಾಗರಾಜ್ :- ಅದಕ್ಕೆ ನಾವುಗಳೆಲ್ಲಾ ಸಹಿ ಹಾಕಿ ಕಳಿಸಿಕೊಟ್ಟಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಸರ್ಕಾರದ ಗಮನ ಸೆಳೆದಾಗ ಇದಕ್ಕೆ ಸರ್ಕಾರದ ಜವಾಬ್ದಾರಿಯೇ ಇಲ್ಲವೆಂದರೆ ಏನು? ಇದರ ಬಗ್ಗೆ ಸರ್ಕಾರ ಏನು ಮಾಡಿದೆ? ಅವರ ನಿಲುವು ಏನು? ಸರ್ಕಾರದ ನೀತಿ ಏನು? ಎನ್ನುವ ಬಗ್ಗೆಯಾದರೂ ಉತ್ತರವನ್ನು ಕಳಿಸಬೇಕಲ್ಲಾ? ಇದೇನು ಹುಡುಗಾಟಿಕೆಯ ಸರ್ಕಾರವೇ? ಸರ್ಕಾರ ಇಷ್ಟೊಂದು ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದಾದರೆ ಇದು ಸರಿಯಲ್ಲಾ; ನಾವುಗಳೆಲ್ಲಾ ಈ ಗಮನ ಸೆಳೆಯುವ ಸೂಚನೆಗೆ ಸಹಿ ಹಾಕಿದ್ದೇವೆ.

ಡಾ. ಹೆಚ್.ಡಿ. ಲಮಾಣಿ :- ಮಾನ್ಯ ಅಧ್ಯಕ್ಷರೆ, ಇದನ್ನು ನನ್ನ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ನನಗೆ 10 ನಿಮಿಷ ಕಾಲಾವಕಾಶವನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ಒದಗಿಸುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- 10 ನಿಮಿಷ ಟೈಂ ಬೇಕೆಂದಾಗ ಅವರಿಗೆ ತಾವು ಕೊಡುವುದಾದರೆ ನಮ್ಮ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ :- ಇನ್ನೊಂದು ನೋಟೀಸ್ ಕೂಡ ಇದೆ. ಇದಕ್ಕೆ ನಾನು ರುಜು ಮಾಡಿದ್ದೇನೆ. ಈಗ ಬಂದಿರುವುದಕ್ಕೆ ನನ್ನ ರುಜುವಿಲ್ಲ. ನನ್ನ ಉದ್ದೇಶವೇನಿದೆ ಎಂಬ ಬಗ್ಗೆ ನಾನು ತಮ್ಮ ಕೊಠಡಿಗೆ ಬಂದು ಮಾತನಾಡಿದ್ದೇನೆ. ಈಗ ಸುಮಾರು 7-8 ದಿವಸದ ಹಿಂದೆ ಮಾತನಾಡಿದ್ದೇನೆ. ಕೃಪಾಂಕ ಎಂದರೆ ಪರೀಕ್ಷೆಗಳಲ್ಲಿ ಪಾಸ್ ಮಾಡುವುದಕ್ಕೆ ಎಂದು ಇವರು ಹೇಳುತ್ತಿದ್ದಾರೆ. ಆದರೆ ಇದು ನಮ್ಮ ಉದ್ದೇಶವಲ್ಲ. ಉದ್ಯೋಗ ಮತ್ತು ಶಾಲಾಕಾಲೇಜುಗಳಿಗೆ ಅಡ್ಮಿಷನ್‌ಗೆ ಸಂಬಂಧಪಟ್ಟಂತೆ. ಏಕೆಂದರೆ ಗ್ರಾಮಾಂತರಪ್ರದೇಶದ

ಅಭ್ಯರ್ಥಿಗಳು ಯಾರು ಉದ್ಯೋಗಕ್ಕೆ ಸೇರುವುದಕ್ಕೆ ಹೋಗುತ್ತಾರೆ ಅವರಿಗೂ ಮತ್ತು ಶಾಲಾಕಾಲೇಜುಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ಶೇಕಡಾವಾರು ಇದ್ದುದನ್ನು ಕೇವಲ15 ಅಂಕಗಳಿಗೆ ಇವರು ಇಳಿಸಿದ್ದಾರೆ. ಇದರಿಂದ ತೊಂದರೆಯಾಗುತ್ತಿದೆ. ಇದುಕೇವಲ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಿದ್ದಲ್ಲ. ವಿದ್ಯಾಭ್ಯಾಸ ಮತ್ತು ಸರ್ಕಾರೀ ನೌಕರಿಗೆ ಸೇರುವುದಕ್ಕೆ ಸಂಬಂಧಪಟ್ಟಿರತಕ್ಕದ್ದು. ಆದ್ದರಿಂದ ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿರುವುದರಿಂದ ಇದನ್ನು ಇವತ್ತು ತಡೆಹಿಡಿದು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :- ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ಲಮಾಣಿಯವರಿಗೆ ವರ್ಗಾವಣೆ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಾವು ಪ್ರಶ್ನೆ ಕೇಳಿರತಕ್ಕದ್ದು ಉನ್ನತ ಶಿಕ್ಷಣ ಮಂತ್ರಿಗಳಿಗೆ. ಏಕೆಂದರೆ ಇದು ಅಲ್ಲಿಂದ ಕೆಳಗಿನ ಹಂತದವರೆಗೂ ಬರುತ್ತದೆ; and it includes also, it embraces agriculture universities also. ಅಂದ ಮೇಲೆ ಇದನ್ನು ನಿಮಗೆ ಹೇಗೆ ವರ್ಗಾವಣೆ ಮಾಡುತ್ತಾರೆ? ಇದು ಬಹಳ ಹುಡುಗಾಟಿಕೆಯಾಗುತ್ತದೆ. ಈ ತೊಂದರೆ ಸುಮಾರು ಒಂದು ವರ್ಷದಿಂದ ಆಗುತ್ತಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿದವರಾಗಿದ್ದಾರೆ. ಬುದ್ಧಿವಂತರಾಗಿದ್ದಾರೆ. ಹುಡುಗಾಟಿಕೆ ಎನ್ನತಕ್ಕ ಪದವನ್ನು ಉಪಯೋಗ ಮಾಡಿದ್ದಾರೆ. ಸರ್ಕಾರ ಹುಡುಗಾಟಿಕೆಯನ್ನು ಮಾಡುತ್ತಿಲ್ಲ. ತಮಗೆ ಮತ್ತು ಸದನಕ್ಕೆ ಗೊತ್ತಿರುವಂತೆ ಈ ಅಧಿವೇಶನವನ್ನೂ 24ನೇ ತಾರೀಖಿಗೆ ಮುಗಿಸಬೇಕೆಂದಿತ್ತು. ಮುಂದುವರಿಯುವುದು ಗೊತ್ತಿಲ್ಲದೆ ಇರತಕ್ಕಂಥದ್ದು ಇತ್ತು. ನಾವು ಕೂಡ ಇತ್ತೀಚೆಗೆ ಇದು ಮುಂದುವರಿಯುತ್ತದೆಂದು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೂ ಉಂಟು. ಕಾರಣಾಂತರದಿಂದ ಮಾನ್ಯ ಮಂತ್ರಿಗಳು ಸದನಕ್ಕೆ ಬಂದಿಲ್ಲ. ಅವರ ಖಾತೆಯ ವಿಷಯದಲ್ಲಿ ಉತ್ತರಹೇಳುವ ಕೆಲಸವನ್ನು ನನಗೆ ವಹಿಸಿದ್ದರು. ಇಂಥಾದ್ದು ನಡೆದುಬಂದಿರುವುದು. ಮಾನ್ಯ ಮಂತ್ರಿಗಳು ಫೈಲ್ ಕೊಟ್ಟಿದ್ದು ಸರ್ಕಾರದ ನೀತಿ ಇದು ಎಂದು ತಿಳಿದು ಬಂದರೆ ಹೇಳುವುದಕ್ಕಾಗುತ್ತದೆ. ಸಂಜೆಯವರೆಗೂ ಯಾವುದು ಬರುತ್ತದೆಂಬುದೂ ಕೂಡ ನಮಗಾಗಲಿ, ನಿಮಗಾಗಲಿ ಗೊತ್ತಾಗುವುದಿಲ್ಲ. ಇದು ತಮಗೂ ಗೊತ್ತಿದೆ. ಆದ್ದರಿಂದ ಇದರಲ್ಲಿ ಹುಡುಗಾಟಿಕೆ ಏನೂ ಇಲ್ಲ. ಮಾನ್ಯ ಸದಸ್ಯರು ಅಷ್ಟು ಲಘುವಾಗಿ ಈ ಪದವನ್ನು ಬಳಸತಕ್ಕದ್ದುಸರಿಯಲ್ಲ. ಅನಿವಾರ್ಯವಾಗಿ ಇಂಥ ಪರಿಸ್ಥಿತಿ ಒದಗಿಬರುತ್ತದೆ. ಸರ್ಕಾರದಿಂದ ಸರಿಯಾದ ಉತ್ತರವನ್ನು ತಾವು ಇವತ್ತೇ ಪಡೆಯಬೇಕೆಂಬುದನ್ನು ನಾವೂ ಒಪ್ಪಿಕೊಳ್ಳೋಣ. ಅನಿವಾರ್ಯವಾಗಿ ಈ ರೀತಿ ಆಗಾಗ ಸರ್ಕಾರ ಹುಡುಗಾಟಿಕೆ ಮಾಡುತ್ತದೆ ಎಂದು ಹೇಳತಕ್ಕದ್ದು ಸರಿಯಲ್ಲ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ :- ಇಷ್ಟು ಗಂಭೀರವಾದ ವಿಚಾರವಾಗಿದ್ದರೂ ಇದನ್ನು ಲಘುವಾಗಿ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ಅಬ್ಕಾರಿ ಇಲಾಖೆ ಒಂದಿದ್ದರೆ ಸಾಕು ಇವರಿಗೆ 800 ಕೋಟಿ ರೂ. ಬಂದುಬಿಡುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ :- ತಾವು ಹಿಂದೆ ಮಂತ್ರಿಯಾಗಿದ್ದಿರಿ. ಮಾನ್ಯ ನಂಜುಂಡಸ್ವಾಮಿಯವರು ಮಂತ್ರಿಯಾಗಿರಲಿಲ್ಲ. ತಮಗೂ ಗೊತ್ತಿದೆ. ಈ ರೀತಿ ಅಧಿವೇಶನ ನಡೆಯುವಾಗ ಒಬ್ಬ ಮಂತ್ರಿ ಇಲ್ಲದಿದ್ದಾಗ ಇನ್ನೊಬ್ಬ ಮಂತ್ರಿ ಅವರ ಪರವಾಗಿ ಉತ್ತರವನ್ನು ಕೊಡುತ್ತಾರೆ. ಇಂಥಾದ್ದು ನಡೆಯುತ್ತಿದೆ. ಆದರೆ ನೀವು ಏತಕ್ಕೆ ಉತ್ತರ ಕೊಡುತ್ತೀರಿ ಎಂದು ಕೇಳತಕ್ಕದ್ದು ಸರಿಯಲ್ಲ. ಇದರಲ್ಲಿ ಜಂಟಿ ಜವಾಬ್ದಾರಿ ಇರುತ್ತದೆ. ಒಬ್ಬ ಮಂತ್ರಿ ಇನ್ನೊಬ್ಬ ಮಂತ್ರಿಯಪರವಾಗಿ ಉತ್ತರವನ್ನು ಹೇಳುತ್ತಾರೆ. ಇದು ನಡೆದು ಬಂದಿರತಕ್ಕದ್ದು.

ಪ್ರೊ. ಇ.ಡಿ. ನಂಜುಂಡಸ್ವಾಮಿ :- ಹುಡುಗಾಟಿಕೆ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಆದರೆ ನಿಮ್ಮ ಭಾಷೆಯನ್ನೇ ನಾನು ಉಪಯೋಗ ಮಾಡಿ ಹೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ :- 15 ದಿವಸದ ಹಿಂದೆ ನಾನು ಇದನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಅದರ ಪ್ರತಿ ನಿಮ್ಮ ಮಂತ್ರಿಗಳಿಗೂ ಹೋಗಿದೆ.

ಶ್ರೀ ಕೆ.ಹೆಚ್.ರಂಗನಾಥ್ :- ತಾವು ಮಂತ್ರಿಗಳಾಗಿ ಕೆಲಸಮಾಡಿದವರು. ಇದು 15 ದಿವಸಕ್ಕೆ ಮುಂಚಿತವಾಗಿ ಬರುವಂಥಾದ್ದೇ?

ಶ್ರೀ ವೈ.ಕೆ.ರಾಮಯ್ಯ :- ನಾನು ಕಳುಹಿಸಿ 2 ವಾರವಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ :- 15 ದಿವಸ ಮುಂಚಿತವಾಗಿ ಪ್ರಶ್ನೆ ಬರತಕ್ಕದ್ದು, ಕಾಲಿಂಗ್ ಅಟೆನ್‌ಷನ್ ಬರತಕ್ಕದ್ದು, 310ರ ನಿಯಮದ ವಿಷಯ ಬರತಕ್ಕದ್ದು ಇದ್ದರೆ ತಾವು ಆಪಾದನೆ ಮಾಡುವುದರಲ್ಲಿ ಅರ್ಥವಿರುತ್ತದೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ತಮಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟಮೇಲೆ ಅದು ಸೆಕ್ರೆಟರಿಯವರಿಗೆ ಹೋಗುತ್ತದೆ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್ :- ಮಾನ್ಯ ವಿರೋಧಪಕ್ಷದ ನಾಯಕರೇ ಅಪ್ರೂವಲ್ ಆಗಿ ಬಂದಿರುತ್ತದೆ. ಅಪ್ರೂವಲ್ ಆಗಿ ಬಂದಿದ್ದರೂ ಕೂಡಾ ಯಾವತ್ತು ಅಜೆಂಡಾಕ್ಕೆ ಬರುತ್ತದೆಂಬುದು ಗೊತ್ತಿರುವುದಿಲ್ಲ. ಅಪ್ರೂವ್ ಆಗಿದ್ದರೂ ಕೂಡ ಹಿಂದಿನ ದಿವಸ ಸಂಜೆಗೆ ಅದು ಬರುವುದು ಗೊತ್ತಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ :- ನಾವು ಶಾಸಕರಾಗಿ ಮಂತ್ರಿಗಳಾಗಿ ಕೆಲಸ ಮಾಡಿರುತ್ತೇವೆ. ಪ್ರಶ್ನೆ ಏನೆಂದರೆ ಕಾಲಿಂಗ್ ಅಟೆನ್‌ಷನ್ ಆಗಲಿ, ಪ್ರಶ್ನೆಗಳಾಗಲಿ, 310ರ ಮೇರೆಯಾಗಲಿ ಸೆಕ್ರೆಟರಿಯವರಿಗೆ ಮೊದಲು ಹೋಗುತ್ತದೆ. ಅಜೆಂಡಾಕ್ಕೆ ಯಾವಾಗ ಬರುತ್ತದೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ :- ನಾವು ಕಾನೂನು ಪ್ರಕಾರ ಮಾತನಾಡಬೇಕೆಂದರೆ ಕಾಲಿಂಗ್ ಅಟೆನ್‌ಷನ್ ಮೇಲೆ ಡಿಸ್‌ಕಸ್‌ಮಾಡಬೇಕೆಂದು ಎಲ್ಲಿದೆ?

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ :- ಸ್ವಾಮಿ ರಂಗನಾಥ್ ರವರೇ, ನಾವು ಯಾರೂ ಡಿಸ್‌ಕಷನ್ ಮಾಡುವುದಕ್ಕೆ ಎದ್ದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್ :- ಅಧ್ಯಕ್ಷರು ಅವಕಾಶ ಕೊಟ್ಟರೆ ತಾವು ಮಾತನಾಡಬಹುದು.

ಶ್ರೀ ಮಲ್ಲಿಕಾರ್ಜುನಖಾರ್ಗೆ :- ದಯವಿಟ್ಟು ಕ್ಷಮಿಸಬೇಕು. ಏತಕ್ಕೆಂದರೆ ನನ್ನ ಎರಡು ಪ್ರಶ್ನೆಗಳನು ಕೌನ್ಸಿಲ್‌ನಲ್ಲಿತ್ತು, ಇವತ್ತು ಕ್ವೊಶ್ಚನ್‌ಗೆ ಹಾಜರಾಗಬೇಕಾದರೆ ನಾನು ಅವರನ್ನು ಕೇಳಿಕೊಂಡು ಇಲ್ಲಿ ಕಾಲಿಂಗ್ ಅಟೆನ್‌ಷನ್ ಇದೆ ಎಂದು ಇಲ್ಲಿಗೆ ಬಂದೆ. ನಾನು ಬಂದಾಗ ಯಾರೂ ಮಂತ್ರಿಗಳು ಸಭೆಯಲ್ಲಿ

ಇಲ್ಲವೆಂದು ಸದಸ್ಯರು ವಾಕ್‌ಔಟ್ ಮಾಡಿದ್ದಾರೆಂದು ಕೇಳಿದೆ. ಇದು ತಮ್ಮ ಗಮನಕ್ಕೂ ಕೂಡ ಬಂದಿದೆ. ಇದರಲ್ಲಿ ಏನಿದೆ 15 ಅಂಕಗಳಿಗೆ ಇಳಿಸಿರುವುದರಿಂದ ಅನ್ಯಾಯವಾಗಿದೆ ಎನ್ನುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರ ಗಮನವನ್ನು ಸೆಳೆಯುತ್ತೇವೆಂದು ತರತಕ್ಕಂಥದ್ದು ಈ ಚರ್ಚೆಯಲ್ಲಿದೆ. ತಮಗೆ ಗೊತ್ತಿದೆ ಈ 15 ಮಾರ್ಕ್ಸ್ ಸೇರಿಸತಕ್ಕಂಥದ್ದು ಮತ್ತು ಡಿಲೀಟ್ ಮಾಡತಕ್ಕಂಥದ್ದು ಹೈಯರ್ ಎಜ್ಯುಕೇಷನ್ ಒಂದಕ್ಕೇ ಸೀಮಿತವಾಗಿಲ್ಲ. ಅವರು ಹೇಳಿದಹಾಗೆ ರಿಕ್ರೂಟ್‌ಮೆಂಟ್ ಇರಬಹುದು, ಅಗ್ರಿಕಲ್ಚರ್ ಯೂನಿವರ್ಸಿಟಿಯೇ ಇರಬಹುದು ಅಥವಾ ಎಂಬಿಬಿಎಸ್ ಯಾವುದಕ್ಕೆ ಸಂಬಂಧಪಟ್ಟಿದ್ದು ಇರಬಹುದು. ಅದು ಕೊನೆಗೆ ಅಲ್ಪಿಮೇಟ್ಲಿ ಡಿ.ಪಿ.ಎ.ಆರ್ ನವರೇ ಅಮೆಂಡ್ ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳೇ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಅದಕ್ಕಾಗಿ ನೀವೇ ಹೈಯರ್ ಎಜ್ಯುಕೇಷನ್ ಎಂದು ಹೇಳಿ ಗಮನ ಸೆಳೆದ ಮೇಲೆ ಅವರು ಬಂದುಈ ಮಾಹಿತಿಯನ್ನು ಹೇಳುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ :- ಮಾನ್ಯ ಸಚಿವರು ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ :- ತಾವು ಈ ರೀತಿ ಹೇಳಿದರೆ ಬಹಳ ಕಷ್ಟವಾಗುತ್ತದೆ. ತಮಗೆ ಗೊತ್ತಿಲ್ಲವೇ? ತಮಗೂ ಕೂಡ ಗೊತ್ತಿದೆ. ಆದಕ್ಕೆ ದಯವಿಟ್ಟು ತಾವು ಇದನ್ನು ವಿಥ್‌ಲ್ಡ್ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದರೆ ಅವರು ಉತ್ತರ ನೀಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಈಗ ಮೀಟಿಂಗ್‌ನಲ್ಲಿದ್ದಾರೆ. ಈ ಕ್ಯಾಪಿಟೇಷನ್ ಫೀಸ್ ಬಗ್ಗೆ ರೂಲ್ಸ್ ಇದಲ್ಲ ಮಾಡಬೇಕಾಗಿದೆ, ಆದ್ದರಿಂದ ಹೈಯರ್ ಎಜ್ಯುಕೇಷನ್ ಮಿನಿಸ್ಟರ್ ಅವರೂ ಸಹ ಅಲ್ಲಿಯೇ ಇದ್ದಾರೆ. ಅದಕ್ಕೆ ಇಲ್ಲಿ ಸದನಕ್ಕೆ ಬರಬಾರದು, ಅಗೌರವ ತೋರಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಅವರು ಬಂದಿಲ್ಲ, ಮೀಟಿಂಗ್ ಮಾಡುತ್ತಿದ್ದಾರೆ, ರೂಲ್ಸ್, ಸ್ಪೆಷಲ್‌ರೂಲ್ಸ್‌ನ್ನು ಫ್ರೇಮ್ ಮಾಡಬೇಕೆನ್ನುವ ದೃಷ್ಟಿಯಿಂದ ಅವರಲ್ಲಿದ್ದಾರೆ, ಅದಕ್ಕೆ ತಾವು ಮುಖ್ಯಮಂತ್ರಿಗಳ ಗಮನವನ್ನು ಸೆಳೆದರೆ ಈ ಎಲ್ಲಾ ಸಂಬಂಧಪಟ್ಟಂಥ ಯೂನಿವರ್ಸಿಟಿಗಳಿಗೆ ಮತ್ತು ರಿಕ್ರೂಟ್‌ಮೆಂಟ್‌ಗೆ ನಮಗೆ ಉತ್ತರವನ್ನು ಕೊಡಲಿಕ್ಕೆ ಆಗುತ್ತದೆ. ದಯವಿಟ್ಟು ಇದನ್ನು ಬದಲಾಯಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ನಾವು ಹೊಸದಾಗಿ ಏನೂ ಕೇಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು.

(3) ಚಿಕ್ಕಮಗಳೂರು ಡಿ.ಸಿ.ಸಿ. ಬ್ಯಾಂಕಿನಲ್ಲಿ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಅನ್ಯಾಯ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ಡಿ.ಸಿ.ಸಿ. ಬ್ಯಾಂಕಿನಲ್ಲಿ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡುವಾಗ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಅನ್ಯಾಯವಾಗಿರುವ ಬಗ್ಗೆಹಾಗೂ ನೇಮಕಾತಿ ಮಾಡುವಲ್ಲಿ ಅಪಾರವಾದ ಭ್ರಷ್ಟಾಚಾರ ಮಾಡಿರುವ ಕುರಿತು ಮಾನ್ಯ ಸಹಕಾರಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಸಹಕಾರ ಸಚಿವರು) :- ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವಿನಂತಿಯ ಪ್ರಕಾರ ಸರ್ಕಾರ 26 ಹೊಸ ಹುದ್ದೆಗಳನ್ನು ಸೃಷ್ಟಿಸಲು ಮತ್ತು ಖಾಲಿ ಇರುವ 4 ಹುದ್ದೆಗಳು ಸೇರಿ ಒಟ್ಟಿಗೆ 30 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿತ್ತು. ಆ ಪ್ರಕಾರ ಬ್ಯಾಂಕ್, ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸಂದರ್ಶನ ನಡೆಸಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಕೂಡ ತಯಾರಿಸಿತ್ತು.

ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಅವ್ಯವಹಾರ ನಡೆಯಲಾಗಿದೆ ಎನ್ನಲಾದ ಅಪಾದನೆಯ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಬಾರದಾಗಿ ಸರ್ಕಾರದ ಆದೇಶದ